ಚಿತ್ರದುರ್ಗದ ಒಂದು ಭಾಗವನ್ನು ರಾಷ್ಟ್ರೀಕರಣ ಮಾಡಿದ್ದೇವೆ, ಉಳಿದ ಭಾಗದ ಜಿಲ್ಲೆಗಳಲ್ಲಿ ಭಾಗಶಃ ಈಗಾಗಲೇ ರಾಷ್ಟ್ರೀಕರಣವಾಗಿದೆ. ಸಂಪೂರ್ಣವಾಗಿ ರಾಷ್ಟ್ರೀಕರಣ ಮಾಡುವ ದೃಷ್ಟಿಯಿಂದ ಸರ್ಕಾರ ಈಗಾಗಲೇ ಕ್ರಮ ತೆಗೆದುಕೊಂಡಿದೆ. ಮೈಸೂರು ಮತ್ತು ಕೋಲಾರ ಜಿಲ್ಲೆಗಳನ್ನು ಈ ವರ್ಷ ರಾಷ್ಟ್ರೀಕರಣ ಮಾಡುವ ದೃಷ್ಟಿಯಿಂದ ಕ್ರಮ ತೆಗೆದುಕೊಳ್ಳಬೇಕೆಂದು ಸಾರಿಗೆ ಸಂಸ್ಥೆಯವರಿಗೆ ಸರ್ಕಾರ ಈಗಾಗಲೇ ಸೂಚನೆಯನ್ನು ಕೊಟ್ಟಿದೆ. ಸರ್ಕಾರ ಮತ್ತು ಸಾರಿಗೆ ಸಂಸ್ಥೆ ಹಣಕಾಸಿನ ಒಂದು ಪರಿಸ್ಥಿತಿಯ ಆಧಾರದ ಮೇಲೆ ಕ್ರಮವನ್ನು ಅತಿಶೀಘ್ರದಲ್ಲಿಯೇ ತೆಗೆದುಕೊಳ್ಳುತ್ತದೆ.

ಶ್ರೀ ಪಿ. ಎಂ. ಉದಾಸಿ.— ಶೀಘ್ರ ಎಂದು ಹೇಳುವುದಕ್ಕೆ ಬದಲಾಗಿ ''ದಿನಗಳು'' ಎಂದು ಹೇಳಿದ್ದರೆ ಚೆನ್ನಾಗಿರುತ್ತಿತ್ತು.

ಶ್ರೀ ಪಿ. ಜಿ. ಆರ್. ಸಿಂಧ್ಯ.— ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಿಗೆ ಆ ರೀತಿ ಉತ್ತರ ಹೇಳುವುದಕ್ಕಾಗುವುದಿಲ್ಲ. ಕೋಲಾರ, ಮೈಸೂರು ಈ ರೂಟ್ಸ್‌ನ್ನು ರಾಷ್ಟ್ರೀಕರಣ ಮಾಡುವುದಕ್ಕೆ ಸಧ್ಯಕ್ಕೆ ಬರುವುದಿಲ್ಲ. ಕಾರಣ ಅಲ್ಲಿ ಇಂಟರ್ ಸ್ಟೇಟ್ ರೂಟ್ಸ್ ಕೂಡ ಬರುತ್ತವೆ ಅದಕ್ಕೆ ಸಂಬಂಧಪಟ್ಟಂತೆ ನಾವು ಬೇರೆ ರಾಜ್ಯದವರ ಜೊತೆ ಮಾತನಾಡಬೇಕಾಗುತ್ತದೆ. ಆದ್ದರಿಂದ ಈ ಕೆಲಸವನ್ನು ನಾವು ನಾಳೆಯೇ ಮಾಡುತ್ತೇವೆಂದು ಹೇಳುವುದಕ್ಕಾಗುವುದಿಲ್ಲ. ಒಟ್ಟಿನಲ್ಲಿ ಇದರ ಬಗ್ಗೆ ನಾವು ಕ್ರಮ ತೆಗೆದುಕೊಂಡಿದ್ದೇವೆ.

ಅಧ್ಯಕ್ಷರು.— ಚು. ಪ್ರ. ಸಂಖ್ಯೆ ೧೪೧ (೯೫೧) ಮಾನ್ಯ ಸದಸ್ಯರು ಗೈರು ಹಾಜರಿ.

ಸಂಡೂರಿನಲ್ಲಿ ನ್ಯಾಯಾಲಯ ಸ್ಥಾಪನೆ

೮೧೫. ಶ್ರೀ ಯು. ಭೂಪತಿ (ಸಂಡೂರು).— ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸಂಡೂರಿನಲ್ಲಿ ನ್ಯಾಯಾಲಯ ಸ್ಥಾಪನೆ ಮಾಡಲು ಸರಕಾರದ ಮಂಜೂರಾತಿ ನೀಡಿರುವುದು ನಿಜವೇ ?

ಆ) ಹಾಗಿದ್ದಲ್ಲಿ, ನ್ಯಾಯಾಲಯದ ಸ್ಥಾಪನೆಯಲ್ಲಿ ವಿಳಂಬವಾಗಲಿರಲು ಕಾರಣಗಳೇನು ?

ಇ) ನ್ಯಾಯಾಲಯವನ್ನು ಯಾವಾಗ ಸ್ಥಾಪಿಸಲಾಗುವುದು ?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—

ಅ) ಸರ್ಕಾರವು ಸಂಡೂರಿನಲ್ಲಿ ಒಂದು ಮುನ್ಸೀಫ್ ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ನ್ಯಾಯಾಲಯವನ್ನು ಸ್ಥಾಪಿಸುವ ತೀರ್ಮಾನವನ್ನು ಕೈಗೊಂಡಿದೆ.

ಆ) ಸೂಕ್ತ ಸ್ಥಳಾವಕಾಶವು ದೊರಕದ ಕಾರಣದಿಂದಾಗಿ.

ಇ) ಸೂಕ್ತ ಸ್ಥಳಾವಕಾಶವು ದೊರಕಿದ ತಕ್ಷಣ.

ಶ್ರೀ ಯು. ಭೂಪತಿ.— ಮಾನ್ಯ ಅಧ್ಯಕ್ಷರೆ, ನನ್ನ (ಅ) ಪ್ರಶ್ನೆಗೆ ಉತ್ತರವಾಗಿ ಮಾನ್ಯ ಸಚಿವರು ''ಸರ್ಕಾರವು ಸಂಡೂರಿನಲ್ಲಿ ಒಂದು ಮುನ್ಸೀಫ್ ಹಾಗೂ ಪ್ರಥಮ ದರ್ಜೆಯ ನ್ಯಾಯಾಲಯವನ್ನು ಸ್ಥಾಪಿಸುವುದಕ್ಕೆ ತೀರ್ಮಾನವನ್ನು ಕೈಗೊಂಡಿದೆ'' ಎಂದು ಹೇಳಿದ್ದಾರೆ. ನಾನಾದರೂ ಕೇಳುತ್ತೇನೆ. ಈ ದಿಸೆಯಲ್ಲಿ ಸರ್ಕಾರ ಏನು ಕ್ರಮವನ್ನು ತೆಗೆದುಕೊಂಡಿದೆ? ಈಗಾಗಲೇ ಅದಕ್ಕೆ ಬೇಕಾದ ಯಾವುದಾದರೂ ಒಂದು ಸೂಕ್ತ ಕಟ್ಟಡವನ್ನು ನೋಡಿದ್ದಾರೆಯೆ ? ನೋಡಿದ್ದರೆ ಆ ಕಟ್ಟಡಗಳು ಯೋಗ್ಯವಾಗಿವೆ ಅಥವಾ ಯೋಗ್ಯವಾಗಿಲ್ಲ ಎಂದು ಏನಾದರೂ ತೀರ್ಮಾನಿಸಿದ್ದಾರೆಯೆ ?

ಶ್ರೀ ಎ. ಲಕ್ಷ್ಮೀಸಾಗರ್.— ಸಂಡೂರಿನಲ್ಲಿ ಆರೋಗ್ಯ ಇಲಾಖೆಗೆ ಸೇರಿದಂಥ ಒಂದು ಹಳೆಯ ಕಟ್ಟಡ ಇದೆ. ಅದರಲ್ಲಿ ಈ ನ್ಯಾಯಾಲಯವನ್ನು ಸ್ಥಾಪಿಸುವುದಕ್ಕೆ ಯೋಗ್ಯವಾದ ಸ್ಥಳ ಎಂದು ಭಾವಿಸಲಾಗಿತ್ತು. ಆದರೆ ಆ ಕಟ್ಟಡ ಆರೋಗ್ಯ ಇಲಾಖೆಯವರಿಗೆ ಸೇರಿದಂಥಾದ್ದು. ಆದರ ಪೂರ್ವಭಾವಿ ಅನುಮತಿಯನ್ನು ತೆಗೆದುಕೊಳ್ಳದೆ ನಾವು ಅಲ್ಲಿ ಏನೂ ಮಾಡುವುದಕ್ಕೆ ಬರುವುದಿಲ್ಲ. ನಾವು

ಈ ಬಗ್ಗೆ ಆರೋಗ್ಯ ಇಲಾಖೆಯವರನ್ನು ಕೇಳಿದಾಗ ಅವರು ಏನು ಹೇಳಿದರೆಂದರೆ, ಈ ಕಟ್ಟಡ ನಮಗೇ ಬೇಕಾಗಿದೆ. ನಾವು ಇಲ್ಲಿ ಒಂದು ಹೆರಿಗೆ ಆಸ್ಪತ್ರೆಯನ್ನು ತೆರೆಯಬೇಕೆಂಬ ಉದ್ದೇಶ ಇರುವುದರಿಂದ ನಾವು ಈ ಕಟ್ಟಡವನ್ನು ನಿಮಗೆ ಕೊಡುವುದಕ್ಕಾಗುವುದಿಲ್ಲ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಆದ್ದರಿಂದ ಮಾನ್ಯ ಸದಸ್ಯರು ದಯವಿಟ್ಟು ಕೋರ್ಟ್ ನಡೆಸುವುದಕ್ಕೆ ಯೋಗ್ಯವಾದ ಯಾವುದಾದರೂ ಕಟ್ಟಡ ಇದ್ದರೆ ಅದನ್ನು ಕೊಡಿಸುವುದಕ್ಕೆ ಪ್ರಯತ್ನ ಮಾಡಿದರೆ ನಾವು ಕೋರ್ಟನ್ನು ಸ್ಥಾಪಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಅಧ್ಯಕ್ಷರು.— ಮಾನ್ಯ ಭೂಪತಿಯವರೆ, ತಮಗೂ ಗೊತ್ತಿದೆ, ಕೆಲವು ಶಾಸಕರು ಶಾಲೆಗಳನ್ನು ತೆರೆಸಬೇಕಾದರೆ, ಅಂಥಾ ಇಂಥ ಕೆಲಸಗಳಿಗಾಗಿ ಸ್ಥಳೀಯವಾಗಿ ಯೋಗ್ಯ ಕಟ್ಟಡಗಳನ್ನು ಒದಗಿಸಿ ಕೊಟ್ಟಿದ್ದಾರೆ. ಅದೇ ರೀತಿ ನೀವೂ ಕೂಡ ಯಾವುದಾದರೂ ಒಂದು ಯೋಗ್ಯ ಕಟ್ಟಡ ಕೊಡಿಸಿದರೆ ಅಲ್ಲಿ ಕೋರ್ಟ್‌ನ್ನು ಸ್ಥಾಪನೆ ಮಾಡುತ್ತಾರೆ.

ಶ್ರೀ ಯು. ಭೂಪತಿ.— ಸ್ಥಳೀಯವಾಗಿ ಅಂಥ ಯೋಗ್ಯ ಕಟ್ಟಡಗಳು ಯಾವುವೂ ಇಲ್ಲದಿದ್ದರೆ ಹೊಸದಾಗಿ ಕಟ್ಟಿಸಬೇಕಾಗುತ್ತದೆ. ಈಗ ಅಲ್ಲಿ ಒಂದು ಗಾಂಧಿ ಕುಟೀರ ಎಂದು ಕಟ್ಟಡ ಇದೆ. ಅಲ್ಲಿ ಲೈಬ್ರರಿಯನ್ನು ನಡೆಸುತ್ತಿದ್ದಾರೆ. ಆ ಕಟ್ಟಡವನ್ನು ಈ ಉದ್ದೇಶಕ್ಕೆ ಕೊಡಬೇಕೆಂದು ನಾವು ಜಿಲ್ಲಾ ಪರಿಷತ್‌ನ ಕಾರ್ಯದರ್ಶಿಯವರಿಗೆ ಹೇಳಿದ್ದೇವೆ. ಅದರ ಪಕ್ಕದಲ್ಲೇ ಒಂದು ಗರ್ಲ್ಸ್ ಹಾಸ್ಟೆಲ್ ಇದೆ. ಅದರ ಕಾಂಪೌಂಡ್‌ನ್ನು ಒಡೆದು ಒಂದು ಗೇಟ್ ಇಟ್ಟರೆ ೩ ರೂಮುಗಳಾಗುತ್ತವೆ. ಅಲ್ಲಿ ಟ್ರಾಫಿಕ್ ಜಾಸ್ತಿ ಇರುವುದರಿಂದ ಅದನ್ನು ಕಂಟ್ರೋಲ್ ಮಾಡುವುದಕ್ಕೂ ಅನುಕೂಲವಾಗುತ್ತದೆಂದು ಅವರೂ ಕೂಡ ಹೇಳಿದ್ದಾರೆ. ಆದರೆ ಇದುವರೆಗೂ ನೀವು ಅದನ್ನು ಏತಕ್ಕೆ ಫೈನಲೈಸ್ ಮಾಡಿಲ್ಲ ?

ಶ್ರೀ ಎ. ಲಕ್ಷ್ಮೀಸಾಗರ್.— ಅಲ್ಲಿ ಬೇರೆ ಬೇರೆ ಕಟ್ಟಡಗಳಿವೆ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಬೇರೆ ಬೇರೆ ಕಟ್ಟಡಗಳಿದ್ದರೂ ಕೂಡ ಹೈಕೋರ್ಟ್‌ನವರಂ ಬಂದು ಆ ಜಾಗದಲ್ಲಿ ಕೋರ್ಟ್‌ನ್ನು ನಡೆಸುವುದಕ್ಕೆ ಸಾಧ್ಯವೇ ಎಂದು ಸ್ಥಳ ಪರಿಶೀಲನೆ ಮಾಡಿ, ಇದು ಯೋಗ್ಯ ಸ್ಥಳವೆಂದು ಅವರು ಒಪ್ಪಿಕೊಂಡ ನಂತರವೇ ಅಲ್ಲಿ ಕೋರ್ಟ್‌ನ್ನು ಸ್ಥಾಪಿಸುವುದಕ್ಕೆ ಸಾಧ್ಯವಾಗುತ್ತದೆ. ಅವರು ಒಪ್ಪಿಕೊಳ್ಳದಿದ್ದರೂ ಇದು ಸರಿಯಾದ ಜಾಗ ಎಂದು ನಾವು ಅವರಿಗೆ ಹೇಳುವುದಕ್ಕಾಗುವುದಿಲ್ಲ. ಹೈಕೋರ್ಟ್‌ನವರು ಹೇಳಿದ ಪ್ರಕಾರ ನಾವು ಈ ವಿಚಾರವನ್ನು ಅಲ್ಲಿಯ ಜಿಲ್ಲಾ ನ್ಯಾಯಾಧೀಶರಿಗೆ ತಿಳಿಸಿದ್ದೇವೆ. ಅವರಿಂದ ಆದಷ್ಟು ಜಾಗ್ರತೆ ಉತ್ತರವನ್ನು ತರಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಯು. ಭೂಪತಿ — ಈಗಾಗಲೇ ಜಿಲ್ಲಾ ನ್ಯಾಯಾಧೀಶರು ಸಂಡೂರಿಗೆ ಬಂದು ಸ್ಥಳವನ್ನು ತಪಾಸಣೆ ಮಾಡಿದ್ದಾರೆ. ಅವರಿಂದ ನಿಮಗೆ ಉತ್ತರ ಏನಾದರೂ ಬಂದಿದೆಯೇ ?...

ಶ್ರೀ ಬಾಬುರೆಡ್ಡಿ ವಿ. ತುಂಗಳ್.— ಮಾನ್ಯ ಅಧ್ಯಕ್ಷರೆ, ಇದೇ ಪ್ರಶ್ನೆಗೆ ಸಂಬಂಧಪಟ್ಟಂತೆ...

ಅಧ್ಯಕ್ಷರು.— ಮಾನ್ಯ ತುಂಗಳ್‌ರವರೇ, ಪ್ರಶ್ನೆ ಇರತಕ್ಕದ್ದು ಸಂಡೂರಿನಲ್ಲಿ ಕೋರ್ಟನ್ನು ಸ್ಥಾಪನೆ ಮಾಡಬೇಕೆಂಬ ವಿಚಾರದಲ್ಲಿ ಸಂಡೂರಿನ ಪ್ರಶ್ನೆಗೂ ನಿಮಗೂ ಏನು ಸಂಬಂಧ? ಆಗಲಿ ಅದೇನು ಕೇಳುತ್ತೀರೋ ಕೇಳಿ.

ಶ್ರೀ ಬಾಬುರೆಡ್ಡಿ ವಿ. ತುಂಗಳ್.— ಇದೇ ಪ್ರಶ್ನೆಗೆ ಸಂಬಂಧಪಟ್ಟಂತೆ ಹಿಂದೆ ಕಾಂಗ್ರೆಸ್ ಸರ್ಕಾರ ಇದ್ದಾಗ ಕೂಡ ಪ್ರಶ್ನೆಯನ್ನು ಕೇಳಲಾಗಿತ್ತು. ಆಗ ಅಂದಿನ ಮಂತ್ರಿಗಳು ಏನು ಉತ್ತರ ಕೊಟ್ಟಿದ್ದರು ಎಂದರೆ ಸಂಡೂರು ಮತ್ತು ಬಿಳ್ಳಿಯಲ್ಲಿ ನ್ಯಾಯಾಲಯವನ್ನು ಸ್ಥಾಪಿಸುವ ವಿಷಯದಲ್ಲಿ ತೀವ್ರ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದರು. ಬೀಳಗಿಯಲ್ಲಿ ನ್ಯಾಯಾಲಯದ ಒಂದು ಪೀಠವನ್ನು ಸ್ಥಾಪಿಸುವ ವಿಚಾರ ಪರಿಶೀಲನೆಯಲ್ಲಿದೆಯೇ ಎಂದು ಕೇಳಿದ್ದಕ್ಕೆ ''ಹೌದು'' ಎಂದು ಹಿಂದೆ ಉತ್ತರವನ್ನು ಕೊಟ್ಟಿದ್ದರು. ಈಗ ನಮ್ಮ ರಾಜ್ಯ ಸರ್ಕಾರದ ನೌಕರರ ಸಂಘದವರು ಒಂದು ಸುಸಜ್ಜಿತ ಕಟ್ಟಡವನ್ನು ಕೊಡುತ್ತೇವೆಂದು ಹೇಳಿದ್ದಾರೆ. ಅದು ಬೇಡವೆಂದರೆ ನಾವೂ ಕೂಡ ಒಂದು ಬೇರೆ ಕಟ್ಟಡವನ್ನು ಕೊಡುವುದಕ್ಕೆ ಸಿದ್ಧವಾಗಿದ್ದೇವೆ. ಸರ್ಕಾರ ಇದರ ಬಗ್ಗೆ ಮನಸ್ಸು ಮಾಡಬೇಕು. ನಮ್ಮ ಆಸೆ ಏನಿದೆ ಅದು ನಿರಾಸೆಯಾಗಿದೆ. ಮಾನ್ಯ ಕಾನೂನು ಸಚಿವರು ನನ್ನ ಪ್ರಶ್ನೆಗೆ ಉತ್ತರ ಹೇಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.— ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ತುಂಗಳ್‌ರವರು ನಿರಾಶರಾಗಬೇಕಾದ ಅವಶ್ಯಕತೆ ಇಲ್ಲ. ಅವರ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಪ್ರಶ್ನೆಯನ್ನು ಇಲ್ಲಿ ಎತ್ತಿರುತ್ತಾರೆ. ಅವರು ಎತ್ತಿರತಕ್ಕ ಪ್ರಶ್ನೆಗಳಿಗೆ ವಿವರಗಳು ಈಗ ನನ್ನಲ್ಲಿಲ್ಲ. ಅವರು ಪ್ರತ್ಯೇಕವಾಗಿ ಪ್ರಶ್ನೆಯನ್ನು ಹಾಕಿದರೆ ಉತ್ತರವನ್ನು ಹೇಳುತ್ತೇನೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಅಧ್ಯಕ್ಷರು.—ಎನ್. ಎಂ. ಅಡ್ಕಂತಾಯ ಅವರು ಚುಕ್ಕೆ ಪ್ರಶ್ನೆ ೧೪೩(೬೦೫) ಮಾನ್ಯ ಸಚಿವರಾದ ಶ್ರೀ ಜೆ.ಎಚ್. ಪಟೇಲ್‌ರವರು ಸ್ವಲ್ಪ ಸಮಯ ಬೇಕೆಂದು ಕೇಳಿರುವುದರಿಂದ ಪ್ರಶ್ನೆಯನ್ನು ಮುಂದೂಡಲಾಯಿತು.

ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಹಣಕಾಸಿನ ಪರಿಸ್ಥಿತಿ

೬೩೨. ಶ್ರೀ ರಮೇಶ್ ಕುಮಾರ್ (ಶ್ರೀನಿವಾಸಪುರ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಆರ್ಥಿಕ ವರ್ಷ ೧೯೮೨ ಮತ್ತು ೧೯೮೬ರ ಕೊನೆಯಲ್ಲಿ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಹಣಕಾಸಿನ ಪರಿಸ್ಥಿತಿ (ವರ್ಷವಾರು ವಿವರಣೆ ಕೊಡಿ).

ಆ) ಡೈರಿ, ಮೀನುಗಾರಿಕೆ ಅಭಿವೃದ್ಧಿ, ಕೋಳಿ ಸಾಕಾಣಿಕೆ ಮುಂತಾದ ಕೃಷಿ ಆಧಾರಿತ ಚಟುವಟಿಕೆಗಳಿಗೆ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯು ಸಾಲ ನೀಡುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆಯೆ ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ೧೯೮೧–೮೨ ಮತ್ತು ೧೯೮೫–೮೬ನೆಯ ಆರ್ಥಿಕ ವರ್ಷದಲ್ಲಿ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಹಣಕಾಸಿನ ಪರಿಸ್ಥಿತಿಯ ವಿವರಗಳು ಈ ಕೆಳಗಿನಂತಿವೆ.—

ವಿವರಗಳು	ಮಾರ್ಚ್ ೩೧ರ ಕೊನೆಯಲ್ಲಿ ಹಣಕಾಸಿನ ಪರಿಸ್ಥಿತಿ (ಕೋಟಿ ರೂಪಾಯಿಗಳಲ್ಲಿ)	
	೧೯೮೨	೧೯೮೬
೧) ಆದಾಯ	೮.೩೪	೨೧.೭೭
೨) ವೆಚ್ಚ	೬.೭೨	೧೯.೦೪
೩) ನಿವ್ವಳ ಲಾಭ	೧.೬೨	೨.೭೩

ಆ) ಇಲ್ಲ.

ಶ್ರೀ ರಮೇಶ್ ಕುಮಾರ್.—ಮಾನ್ಯ ಅಧ್ಯಕ್ಷರೇ ಈ ಸಂಸ್ಥೆಯು ಬಹುತೇಕ ಚಟುವಟಿಕೆಗಳು ಪಟ್ಟಣ ನಗರಪ್ರದೇಶಗಳಿಗೆ ಸೀಮಿತವಾಗಿದೆ. ಗ್ರಾಮಾಂತರ ಪ್ರದೇಶಗಳಲ್ಲಿರುವ ಕೃಷಿ ಆಧಾರಿತ ಕೆಲಸಗಳಿಗೆ, ಕೈಗಾರಿಕೆಗಳಿಗೆ ಈ ಸಂಸ್ಥೆಯಿಂದ ಹಣವನ್ನು ಕೊಡುವುದಕ್ಕೆ ಹಿಂಜರಿಯುತ್ತಿದ್ದಾರೆ, ಪಟ್ಟಣ ಪ್ರದೇಶಗಳಲ್ಲಿರತಕ್ಕಂಥವರು ಮಾತ್ರ ಸಾಲವನ್ನು ತೆಗೆದುಕೊಂಡರೆ, ವಾಪಸ್ ಕೊಡುತ್ತಾರೆ, ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥವರು ಕೊಡಲಿಕ್ಕೆ ಆಗುವುದಿಲ್ಲವೆನ್ನುವುದು ಕಾರಣವೇ? ಯಾವ ಕಾರಣಕ್ಕಾಗಿ ಅವರಿಗೆ ಸಾಲವನ್ನು ಕೊಡುವುದಿಲ್ಲ. ಈವತ್ತು ಪಿ.ಎಲ್.ಡಿ, ಬ್ಯಾಂಕ್‌ಗಳು ಏನು ಇರುತ್ತವೆ ಇವು ಕೃಷಿ ಆಧಾರಿತ ಚಟುವಟಿಕೆಗಳಿಗೆ ಸಾಲದ ಸೌಲಭ್ಯವನ್ನು ಕೊಡದಿದ್ದರೆ ಕೃಷಿ ಆಧಾರಿತ ಯಾವುದೇ ಸಂಸ್ಥೆಯನ್ನು ಸ್ಥಾಪನೆ ಮಾಡಲಿಕ್ಕೆ ಸಹಕಾರ ಸಿಕ್ಕದ ತಾಗುತ್ತದೆ. ಕೃಷಿ ಆಧಾರಿತ ಕೈಗಾರಿಕಾ ಸಂಸ್ಥೆಗಳಿಗೆ ಬಹಳ ಅಗತ್ಯವಿದೆ ಆ ದೃಷ್ಟಿಯಿಂದ ಇದರ ಅಗತ್ಯತೆ ಬಹಳವಾಗಿದೆ ಎಂದು ಹೇಳುತ್ತೇನೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡಬೇಕೆಂದು ಕೇಳುತ್ತೇನೆ.